ಮಾಡತಕ್ಕಂಥದನ್ನು ನೋಡುವ ಸಂಪ್ರದಾಯವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೀರಿ. ಇವತ್ತು ವಿಧಾನ ಸೌಧದ ಮುಂದೆ ಇರುವ ಗೋಪಾಲಗೌಡ ವೃತ್ತ ಸತ್ಯಾಗ್ರಹಕ್ಕೆ ಮೀಸಲಾಗಿಟ್ಟ ಕ್ಷೇತ್ರ. ಈ ಸರ್ಕ್ಯಲ್‌ಗೆ ಮೊದಲಿನಿಂದಲೂ ಗೋಪಾಲಗೌಡ ಸರ್ಕಲ್ ಎಂದು ಹೆಸರಿಡುವುದಕ್ಕೆ ನಾನೇ ಕಾರಣ. ನೂರಕ್ಕೆ ನೂರು ಹೋರಾಟ ಮಾಡಿ ಅದಕ್ಕೆ ಗೋಪಾಲಗೌಡ ಸರ್ಕ್ಯಲ್ ಎಂದು ನಾಮಕರಣ ನಾನೇ ಮಾಡಿದೆ. ಇದರಲ್ಲಿ ಯಾವುದೇ ಅನುಮಾನವಿಲ್ಲ. ತಾವು ಹೈ ಕೋರ್ಟ್‌ಗೆ ಮನವಿಯನ್ನು ಸಲ್ಲಿಸಿದ್ದಾಗ, ಹೈ ಕೋರ್ಟ್ ಅಲ್ಲಿ ಯಾರೂ ಚಳುವಳಿ ಮಾಡಬಾರದೆಂದು ತೀರ್ಪು ಕೊಟ್ಟರು. ಆದ್ದರಿಂದ ನಾನು ಸರ್ಕಾರಕ್ಕೆ ಹೇಳುವುದೇನೆಂದರೆ ತಾವು ಒಂದು ಮನವಿ ಸಲ್ಲಿಸಿ ಈ ಒಂದು ಪ್ರದೇಶವನ್ನು ತಾವು ಬಿಡಬೇಕಾಗುತ್ತದೆ ಎಂಬ ಮಾತನ್ನು ಮಾಡಲಿಲ್ಲ, ಇವತ್ತು ಅದನ್ನು ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಪ್ರತಿವಾರ ಚಳುವಳಿ ಮಾಡುವವರಿಗೆ ಒಂದು ಜಾಗ ಮಾಡಿ; ಅಪರೂಪಕ್ಕೆ ಚಳುವಳಿ ಮಾಡುವವರಿಗೆ ಒಂದು ಜಾಗ ಮಾಡಿ. ಇದನ್ನು ನೀವೆ ಇತ್ಯರ್ಥ ಮಾಡಿಕೊಳ್ಳಿ.

(ಊ) ಗಣಪತಿ ಉತ್ಸವದ ಸಂಬಂಧದಲ್ಲಿ : ಕೋರ್ಟಿನಿಂದ ನಾನ್ ಬೇಲ್‌ಬಲ್ ವಾರಂಟ್ ಬಂದಿರುವ ಬಗ್ಗೆ

+ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಅಸೆಂಬ್ಲಿಗೆ ಹೊರಟಾಗ ಇದ್ದಕ್ಕಿಂದ್ದಹಾಗೆ ಒಬ್ಬರು ಬಂದು ನಾನ್ ಬೇಲ್‌ಬಲ್ ವಾರಂಟ್ ಇದೆ ಎಂದು ಬಂದಿದ್ದರು. ಆಗ ನನಗೆ ಆಶ್ಚರ್ಯವಾಯಿತು. ಏಕೆಂದರೆ ನನ್ನ ಮೇಲೆ ಕೇಸ್ ಹಾಕಿರುವುದು ಗೊತ್ತಿಲ್ಲ ಮತ್ತು ಕೇಸಿನ ನೋಟೀಸ್ ನನಗೆ ಬಂದಿಲ್ಲ, ಹಿಯರಿಂಗ್ ಆಗಿದ್ದು ಗೊತ್ತಿಲ್ಲ. ಆತನಿಗೆ ಏತಕ್ಕೆ ಈ ವಾರಂಟ್ ಬಂತು ಎಂದು ಕೇಳಿದರೆ ನೀವು ಊರಲ್ಲಿ ಇರಲಿಲ್ಲ ಎಂದು ಬರೆದುಕೊಂಡು ಹೋಗಿದೆ ಎಂದು ಹೇಳುತ್ತಾನೆ. ನನಗೆ ಕೇಸ್ ಹಾಕಿರುವುದು ಗೊತ್ತಿಲ್ಲ ಮತ್ತು ಕೋರ್ಟಿಗೂ ಹೋಗಿಲ್ಲ. ನಾನು ಅಸೆಂಬ್ಲಿಗೆ ಹೋಗುವ ಸಂದರ್ಭದಲ್ಲಿ ನಾನ್ ಬೇಲ್‌ಬಲ್ ವಾರಂಟ್ ಇದೆ ಎಂದು ಹೇಳಿದರು; ನಾನು ಈಗ ಅಸೆಂಬ್ಲಿಗೆ ಹೊರಟ್ಟಿದ್ದೇನೆ. ಈಗ ಜೈಲಿಗೆ ಹೋಗಬೇಕೋ ಅಥವಾ ಅಸೆಂಬ್ಲಿಗೆ ಹೋಗಬೇಕೋ ನೀನೇ ತೀರ್ಮಾನ ಮಾಡು ಎಂದು ಹೇಳಿದ್ದಕ್ಕೆ ಆತರು ನಕ್ಕು ಹೊರಟುಹೋದರು. ಶಿವಮೊಗ್ಗದಲ್ಲಿ ಗಣೇಶನ ಗಲಾಟೆ ತಡೆಯುವ ಸಂದರ್ಭದಲ್ಲಿ ಯಾರೋ ಅಧಿಕಾರಿಗಳ ಜೊತೆ ಮಾತುಕತೆ ಆದಾಗ,..

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರು, ನೀವೇ ಅಧಿಕಾರಕ್ಕೆ ಬಂದರೆ ಗಲಾಟೆಯೆಲ್ಲಾ ನಿಂತು ಹೋಗುತ್ತದೆಂದು ಹೇಳಿದರು.

ಶ್ರೀ ಕೆ. ಎಸ್.ಈಶ್ವರಪ್ಪ:- ಇವತ್ತು ದೇಶದ ಜನ ಅಪೇಕ್ಷೆ ಪಡುತ್ತಿರುವುದು ಇದೇ, ಮತ್ತು ಮಾನ್ಯ ಖರ್ಗೆಯವರು ಅಭಿಪ್ರಾಯವು ಅದೇ ಆಗಿದೆ, ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಶಿವಮೊಗ್ಗದಲ್ಲಿ ಗಣಪತಿ ಉತ್ಸವದಲ್ಲಿ ಗಲಾಟೆ ಆಗುತ್ತಿತ್ತು ಎಂದು ಹೇಳಿದರು. ಈಗ ಇವರೇ ಎಂಎಲ್‌ಎ ಆದಮೇಲೆ ಗಲಾಟೆ ಎಲ್ಲಿ ನಡೆಯುತ್ತದೆ? ಎಂಎಲ್‌ಎ ಆಗುವುದಕ್ಕಿಂತ ಮುಂಚೆ ಬೇಕಾದರೆ ನಡೆಯುತ್ತಿತ್ತು.

ಶ್ರೀ ಕೆ. ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಎಂಎಲ್ಎ ಆದಮೇಲೆ ಹಾಕಿರುವ ಕೇಸ್ ಅಂತೆ. ಅವರು ಬಂದ ಮೇಲೆ ನನಗೆ ನಾನ್ ಬೇಲ್ ವಾರಂಟ್ ಬಂದಿದೆ ಎಂದು ಗೊತ್ತಾಯಿತು. ನನ್ನ ಮೇಲೆ ಕೇಸ್ ಹಾಕಿರುವುದು ಗೊತ್ತಿಲ್ಲ, ನನಗೆ ಒಂದು ಹಿಯರಿಂಗ್ ಬಂದಿಲ್ಲ, ಕೋರ್ಟಿಗೆ ಹೋಗುವುದಕ್ಕೆ ಆಗಿಲ್ಲ. ಸನ್ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಂತರ ಸರ್ಕಾರ ಹಾವಳಿರಲ್ಲಿ ಕೇಳಕೊಳ್ಳುವುದೇನೆಂದರೆ, ಆ ಕೇಸ್‌ನ್ನು ತರಿಸಿಕೊಂಡು ವಾಪಸು ತೆಗೆದುಕೊಳ್ಳುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಯೇ ಅಥವಾ ನಾನು ಜೈಲಿಗೆ ಹೋಗಬೇಕೆಂಬ ತಮ್ಮ ಅಪೇಕ್ಷೆ ಇದೆಯೇ ಎಂಬುದನ್ನು ತಾವು ತೀರ್ಮಾನ ಮಾಡಿ ಹೇಳಬೇಕು.

(ಊ) ಕಾಪುವಿನಲ್ಲಿ ಸರ್ಕಾರಿ ಕಾಲೇಜಿನ ಕಟ್ಟಡ ನಿರ್ಮಾಣ

ಶ್ರೀ ವಸಂತ ವಿ. ಸಾಲಿಯಾನ (ಕಾಪು):- ಸನ್ಮಾನ್ಯ ಅಧ್ಯಕ್ಷರೆ, ನನ್ನ ಕಾಪು ಕ್ಷೇತ್ರದಲ್ಲಿ 1992-93ನೇ ಇಸವಿಯಲ್ಲಿ ಒಂದು ಪೂರ್ಣ ಪ್ರಮಾಣದ ಸರ್ಕಾರಿ ಕಾಲೇಜು ಪ್ರಾರಂಭವಾಗಬೇಕಾಗಿತ್ತು. ಆದರೆ ಇವತ್ತು ಹಳೇ ಮಾರಮ್ಮ ದೇವಸ್ಥಾನದಲ್ಲಿ ನಡೆಸಿಕೊಂಡು ಬಂದಿದ್ದೇವೆ. ಕಾಲೇಜಿಗೆ ಬೇಕಾದ ಕಟ್ಟಡಕ್ಕೆ 12-09-1994ರಲ್ಲಿ 10 ಲಕ್ಷ ರೂಪಾಯಿಗೆ ಆಡಳಿತ ಮಂಜೂರಾತಿ ದೊರಕಿ, ಆದಕ್ಕೆ ಶಂಕುಸ್ಥಾಪನೆಯನ್ನು ಕೂಡ ಮಾಡಲಾಯಿತು. ಅದೇ ಪ್ರಕಾರ 1995-96ನೇ ಇಸವಿಯಲ್ಲಿ 18 ಲಕ್ಷ ರೂಪಾಯಿ ಪುನ: ಮಂಜೂರಾತಿ ಆಯಿತು ಮತ್ತು ಟೆಂಡರ್ ಆಗಿ ಮೂರನೇ ಒಂದು ಭಾಗ ಗ್ರಾಂಟ್ ಇಲ್ಲದೆ ಪುನ: ಅದು ಅಲ್ಲಿಗೆ ನಿಂತು ಹೋಯಿತು. 1997-98ರಲ್ಲಿಯೂ ಪುನ: ಮೂರನೇ ಒಂದು ಭಾಗ ಗ್ರಾಂಟ್ ಇಲ್ಲದೆ ಪುನ: ಆ ಟೆಂಡರ್ ಬಿದ್ದು ಹೋಯಿತು. ಸುಮಾರು ಐದಾರು ವರ್ಷದಿಂದ ದೇವಸ್ಥಾನದಲ್ಲಿ ಆ ಕಾಲೇಜು ನಡೆಯುತ್ತಿದೆ. ಈ ವಿಷಯದ ಬಗ್ಗೆ ಮಾನ್ಯ ಆರ್ಥಿಕ ಸಚಿವರು ಮತ್ತು ಶಿಕ್ಷಣ ಮಂತ್ರಿಗಳ ಜೊತೆ ಮತ್ತು ಲೋಕೋಪಯೋಗಿ ಸಚಿವರ ಜೊತೆ ವಿಧಾನ ಸಭೆಯಲ್ಲಿ ಅನೇಕ ಬಾರಿ ಪ್ರಸ್ತಾಪ ಮಾಡಿದ್ದೇನೆ. ಈ ಬಾರಿ ಮೂರನೇ ಒಂದು ಭಾಗ ಗ್ರಾಂಟ್ ಕೊಟ್ಟು ಕಟ್ಟಡ ಆಗುವಂತಹ ರೀತಿಯಲ್ಲಿ ಮಾಡಬೇಕೆಂದು ತಮ್ಮ ಮುಖೇನ ಮೂರು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

(ಋ) ಕಾವೇರಿ ಗಲಭೆ ಸಂದರ್ಭದಲ್ಲಿ ನಿರಪರಾಧಿಗಳ ಮೇಲೆ ಮೊಕದ್ದಮೆ.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ):- ಮಾನ್ಯ ಅಧ್ಯಕ್ಷರೆ, ಕಾವೇರಿ ಗಲಭೆ ನಡೆದಂತಹ ಸಂದರ್ಭದಲ್ಲಿ, ಬೆಂಗಳೂರು ಮಹಾನಗರದಲ್ಲಿ ನೂರಾರು ಜನ ನಿರಪರಾಧಿಗಳ ಮೇಲೆ ಕೇಸ್ ಇದೆ. ಇವತ್ತಿನ ದಿವಸ ಗಲಭೆ ಮಾಡುವಾಗ ಗಲಭೆ ಮಾಡುವವರು ಓಡಿ ಹೋಗುತ್ತಾರೆ, ಆದರೆ ಯಾವುದೇ ತಪ್ಪು ಮಾಡದೆ ಇರುವವನ್ನು ಸಿಕ್ಕಿ ಹಾಕಿಕೊಳ್ಳುತ್ತಾನೆ. ಆದ್ದರಿಂದ ಸರ್ಕಾರ ಪುನರ್ ಪರಿಶೀಲನೆ ಮಾಡಿ ವಾಪಸು ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ ಈ ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಂಡಿರುವವರು ಒಂದು ತಿಂಗಳಲ್ಲಿ 2 ಅಥವಾ 3 ಸಾರಿ ಕೋರ್ಟ್‌ಗೆ ಹೋಗಬೇಕಾಗುತ್ತದೆ, ಆದ್ದರಿಂದ ಅವರಿಗೆ ಸಹಾಯ ಆಗುತ್ತದೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.